ನಗುವಿನಲ್ಲಿ ಜೀವವೇ ಇಲ್ಲ. “ಆರಾಮಿಲ್ಲದಿದ್ರ ಡಬ್ಬಿ ಮಾಡಬ್ಯಾಡಾ. ಅಲ್ಲೆ ಏನಾರೆ ತಿಂತೀನಿ” ಎಂದ. “ಬ್ಯಾಡಪಾ... ನಮಗರೆ ಮಾಡಬೇಕಲಾ. ನೀ ಲಗು ಲಗು ರೆಡಿಯಾಗು” ಎಂದು ತಯಾರಿ ಮಾಡತೊಡಗಿದಳು. ಚಪಾತಿ, ಪಲ್ಯ ಯಾಂತ್ರಿಕವಾಗಿ ಸಿದ್ಧವಾಗಿ ಡಬ್ಬಿ ತುಂಬಿಕೊಂಡು ಕುಳಿತವು. “ಮಧ್ಯಾಹ್ನ ನಿದ್ದಿ ಮಾಡಮ್ಮಾ. ಆರಾಮಾಗ್ತದ. ಬಾಯ್” ಎಂದು ಟಾಟಾ ಮಾಡಿದ. ಪುಣ್ಯಕ್ಕೆ ಮಗಳು ನೇತ್ರಾ ಗೆಳತಿಯ ಅಕ್ಕನ ಮದುವೆಗೆ ಕೊಡಗಿಗೆ ಹೋಗಿದ್ದಾಳೆ. ಹಾಗೇ ಸ್ನೇಹಿತೆಯರೆಲ್ಲ ಸೇರಿ ಸುತ್ತ ಮಡಿಕೇರಿ, ಮೈಸೂರು ನೋಡಿಕೊಂಡು ಬರುತ್ತಾರೆ. ಅವಳಿಗಿಷ್ಟೇ ಹೇಳಿದ್ದರೆ ಸಾಲುತ್ತಿರಲಿಲ್ಲ. ಎಲ್ಲಾ ಬಿಡಿಸಿ ವಿವರವಾಗಿ ಹೇಳಬೇಕಿತ್ತು. ಮೂಲ ಕೆದಕಿ ಅಪ್ಪನೊಡನೆ ಸೇರಿ ನಕ್ಕು ಹಗುರಾಗುತ್ತಿದ್ದಳು.

ಅಷ್ಟರಲ್ಲಿ ಸಂಜಯ ಚಹಾದ ಕಪ್ ಹಿಡಿದು ಬಂದ. “ಮಾರಿ ತೊಳಕೊಂಡು ದೇವರಿಗೆ ನಮಸ್ಕಾರಾ ಮಾಡು. ತಾಜಾ ಹಾಲಿನ ಚಹಾ ಕುಡಿ. ಏನೂ ಆಗೂದುಲ್ಲಾ” ಎಂದು ಕೊಟ್ಟ. ಅವಳಿಗೆ ಮತ್ತೆ ಅಳು ಉಮ್ಮಳಿಸಿತು. ತಲೆ ಚಚ್ಚಿಕೊಂಡವ, “ಕನಸಿಗೆ ಯಾರರೇ ಇಷ್ಟು ಹೆದರತಾರೇನ ಹುಚ್ಚಿ?” ಎಂದ. ಅವಳು “ಊಂ... ನಿಮಗೇನು... ನಡುನೀರಾಗಿನ ಸಂಸಾರ ನಂದು. ನೇತ್ರಾಂದು ಇನ್ನೆರೆಡು ವರ್ಷಕ್ಕ ಬಿ.ಇ. ಮುಗೀತದ. ಆಮ್ಯಾಲೆ ನೌಕರಿ, ಮದವಿ, ಬಸರು, ಬಾಣಂತನಾ... ಎಲ್ಲಾ ಯಾರು ಮಾಡಾವ್ರು? ಬ್ಯಾರೇ ಯಾರು ಮಾಡಿದ್ರೂ ತಾಯಿ ಮಾಡಿಧಂಗ ಆಗ್ತದೇನು? ಆಶಿಶ ಇನ್ನೂ ಸಣ್ಣ ಹುಡುಗ. ಜವಾಬ್ದಾರಿನ ಇಲ್ಲಾ. ನೀವೇನು... ಇನ್ನೊಂದು ಮದವಿ ಮಾಡಕೊಂಡು ಆರಾಮ ಇದ್ರೂ ಇದ್ರೆ. ಮಕ್ಕಳ ಗತಿ ಏನು?” ಎಂದು ಕೇಳಿದಾಗ ಯೋಚನೆಯನ್ನೂ ಮಾಡದವ ಹೌಹಾರಿದ. ಕೈಲಿದ್ದ ಚಹಾ ಕಪ್ ಸಮೇತ ಧರೆಯ ಪಾಲಾಗಿತ್ತು. ನಿಧಾನವಾಗಿ ಅವಳ ಪಕ್ಕ ಬಂದು ಕುಳಿತವ, “ಒಂದ ಕನಸು... ಆಫ್ಟರ್ ಆಲ್... ಒಂದ ಕನಸಿನ ಬಗ್ಗೆ ಇಷ್ಟ ವಿಚಾರ ಮಾಡ್ಲಿಕತ್ತೀಯಲಾ. ಅದೂ ಸೈನ್ಸ್ ಓದಿ ಬಿ.ಎಸ್ಸಿ. ಮಾಡಿ... ನಿನ್ನೇನು ಶಾಣ್ಯಾ ಅನಬೇಕೋ... ಧಡ್ಡ ಅನಬೇಕೋ ತಿಳೀವಲ್ತು. ನಿನಗೇನೂ ಆಗೂದುಲ್ಲಾ. ನಾ ಇನ್ನೊಂದು ಮದವಿ ಮಾಡಕೊಳ್ಳೋ ಪಾಳೀನ ಬರೂದುಲ್ಲಾ. ಹಂಗ ಇದು ನಿನ್ನೊಬ್ಬಾಕೀದ ಅಲ್ಲ... ನಮ್ಮ ಸಂಸಾರ ಅದ. ಟೀವಿಯೊಳಗ ಯಾವುದರ ಫೋಟೋ ಪಿಕ್ಚರ್ ಹಚ್ಚಿ ಹೋಗ್ತೇನಿ. ನೋಡಿ ರಿಲ್ಯಾಕ್ಸ್ ಆಗು” ಎಂದು ಬಿದ್ದ ಚಹಾ ತಾನೇ ಒರೆಸಿ ಕಪ್ ತೆಗೆದುಕೊಂಡು ನಡೆದ. ಚಹಾ ಒಳಗೆ ಸೇರಿದರೂ ಸುಜಾತಳಿಗೆ ಕನಸಿನ ಗುಂಗು ಬಿಡಲಿಲ್ಲ. ಮತ್ತೆ ಬೆಡ್‌ರೂಮ್ ಸೇರಿ ಹೊದ್ದು ಮಲಗಿಬಿಟ್ಟಳು.

ಸ್ನಾನ ಮುಗಿಸಿ ಬಂದ ಸಂಜಯ ಅವಳನ್ನು ನೋಡಿ ಯೋಚನೆಗೀಡಾದ. “ಮತ್ತ... ಈಗ ಏನ ಮಾಡಂತೀ ನನಗ?” ಎಂದು ಮಂಚದ ಬದಿಯಲ್ಲಿ ನಿಂತು ಕೇಳಿದ. ತಕ್ಷಣ ಎದ್ದು ಕುಳಿತ ಸುಜಾತ, “ಡಾಕ್ಟರ್ ಕಡೆ ಹೋಗಿಬರೋಣೇನು?” ಎಂದಳು. “ಯಾರಿಗೆ? ಯದಕ್ಕ?” ಎಂದವ ತಲೆ ಕೆರೆದ. “ನನಗ...” ಎಂದಳು ನಿಧಾನವಾಗಿ. ಒಂದು ಕ್ಷಣ ಯೋಚಿಸಿದವ “ಆತು. ತಯಾರಾಗು” ಎಂದ. ತುಸು ಜೀವಕಳೆ ತುಂಬಿಕೊಂಡವಳು ಎದ್ದು ಸ್ನಾನಕ್ಕೆ ನಡೆದಳು. ಸಂಜಯ ಆಫೀಸಿಗೆ ಫೋನ್ ಮಾಡಿ ಅರ್ಧ ದಿನದ ರಜೆ ಕೇಳಿದ. ಇಬ್ಬರೂ ಚಪಾತಿ, ಪಲ್ಯ ತಿಂದು ಕಾರಿನಲ್ಲಿ ಕುಳಿತರು. ಮಾಮೂಲಿನಂತೆ ಫ್ಯಾಮಿಲಿ ಡಾಕ್ಟರ್ ಕ್ಲಿನಿಕ್ಕಿನತ್ತ ನಂದಿನಿ ಲೇಔಟಿಗೆ ಹೊರಟಾಗ ತಡೆದವಳು, “ಫೋರ್ಟಿಸ್‌ನ್ಯಾಗ ಹಾರ್ಟ್ ಸ್ಪೆಷಲಿಸ್ಟ್‌ಗ ತೋರಿಸಿಬಿಡೋಣು. ಅಂದ್ರ ನನಗ ಸಮಾಧಾನಾಗ್ತದ. ಪ್ಲೀಸ್...” ಎಂದು ಅವನ ಕೈ ಒತ್ತಿದಳು. ಮಾತಿಲ್ಲದೇ ಕಾರು ರಾಜಾಜಿನಗರದತ್ತ ತಿರುಗಿತು.

ಫೀಸ್ ತೆತ್ತು ಕೌಂಟರ್‌ನಲ್ಲೇ ಬಿಲ್ ಪಡೆದು ಒಳಹೊಕ್ಕವರಿಗೆ, “ಮೊದಲನೇ ಸರ್ತಿ ಬರ್ತಿದೀರಾ?” ಎಂದು ಕೇಳಿ ಒಂದು ಫಾರ್ಮ ತುಂಬಿಸಲು ಹೇಳಿದ ಅಟೆಂಡರ್. “ಯಾರಿಗೆ... ಏನು ತೊಂದರೆ?” ಎಂದು ಕೇಳಿದಾಕ್ಷಣ ಗಲಿಬಿಲಿಯಿಂದ ಸಂಜಯ ಸುಜಾತಳ ಮುಖ ನೋಡಿದ. ಅವಳು ‘ಜನರಲ್ ಚಕಪ್’ ಎಂದಳು. “ಸರಿ, ಬನ್ನಿ” ಎಂದವ ಬಿ.ಪಿ., ಶುಗರ್ ಎಲ್ಲ ಟೆಸ್ಟ್ ಮಾಡಿಯೇ